**ಓ ಎಸ್ 73/2022 ಪಿಡಬ್ಲ್ಯೂ1**

**ಸಾಕ್ಷಿಯನ್ನು ದಿಃ 02.02.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿಗಳ ಪರ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ**

ನಮ್ಮ ತಂದೆಗೆ ಅವರ ತಂದೆಯ ಕಡೆಯಿಂದ ಪಿತ್ರಾರ್ಜಿತವಾಗಿ ಯಾವ ಯಾವ ಆಸ್ತಿಗಳು ಬಂದಿವೆ ಎಂದು ನಾನು ತಿಳಿದುಕೊಂಡಿದ್ದೇನೆ. ಆ ಆಸ್ತಿಯ ಸರ್ವೆ ನಂಬರುಗಳು ನನಗೆ ನೆನಪಿಲ್ಲ. ಸುಮಾರು 10 ರಿಂದ 12 ಸ್ಥಳದಲ್ಲಿ ನಮ್ಮ ತಾತನಿಂದ ನಮ್ಮ ತಂದೆಗೆ ಆಸ್ತಿಗಳು ಬಂದಿವೆ. ಆ ಆಸ್ತಿಗಳ ಅಕ್ಕಪಕ್ಕದವರು ನೀಡಿದ ಮಾಹಿತಿ ಮೇರೆಗೆ ದಾಖಲೆಗಳನ್ನು ಪಡೆದುಕೊಂಡಿದ್ದೇನೆ.

ಸುಮಾರು 10 – 12 ವರ್ಷಗಳ ಹಿಂದೆ ನಮ್ಮ ತಾಯಿ ಮರಣ ಹೊಂದಿದ ಕೂಡಲೇ ಭಾಗ ಕೊಡಿ ಎಂದು ಕೇಳಿದ್ದೆ. ಈ ಸಂಗತಿಯನ್ನು ನಾನು ದಾವಾ ಪತ್ರದಲ್ಲಿ ಬರೆಸಿದ್ದೇನೆ. ನನ್ನ ಅಣ್ಣನಾದ 1 ನೇ ಪ್ರತಿವಾದಿ ನಾಗೇಗೌಡರು ದಾವಾ ಆಸ್ತಿಗಳನ್ನು ಸೇರಿದಂತೆ ಎಲ್ಲಾ ಸ್ವತ್ತುಗಳನ್ನು ತನ್ನ ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿರುವುದರಿಂದ ನಾನು ದಾವಾ ಆಸ್ತಿಗಳಲ್ಲಿ ಭಾಗ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ತನ್ನ ಮಕ್ಕಳಿಗೆ ಆಸ್ತಿ ಹಂಚಿಕೆ ಮಾಡುತ್ತಿರುವ ಸಂಗತಿಯನ್ನು ನನ್ನ ಅಣ್ಣ ನಾಗೇಗೌಡ ನನಗೆ ತಿಳಿಸಿ ಆನಂತರವೇ ಆಸ್ತಿ ಹಂಚಿಕೆ ಮಾಡಿದ್ದಾರೆ ಎಂಬ ಸಂಗತಿ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ನನ್ನ ಅಣ್ಣ ನಾಗೇಗೌಡ ತನ್ನ ಮಕ್ಕಳಿಗೆ ಆಸ್ತಿ ಹಂಚಿಕೆ ಮಾಡಲು ನಾನು ಮತ್ತು 6 ನೇ ಪ್ರತಿವಾದಿ ರತ್ನಮ್ಮ ಸಮ್ಮತಿ ಸೂಚಿಸಿದ್ದೆವು ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ನನ್ನ ಅಣ್ಣನ ಮಕ್ಕಳಾದ 3 ಮತ್ತು 4 ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ದುರುದ್ದೇಶದಿಂದ ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ಹಾಗೂ ಅವರ ಮಕ್ಕಳು ಸ್ವಯಾರ್ಜಿತವಾಗಿ ಸಂಪಾದಿಸಿರುವ ಆಸ್ತಿಗಳ ಬಗ್ಗೆ ನಾನು ತಿಳಿದುಕೊಂಡಿಲ್ಲ. ಪಿತ್ರಾರ್ಜಿತ ಆಸ್ತಿಗಳಿಂದ

ಅಪಾರವಾದ ಆದಾಯ ಬರುತ್ತಿತ್ತು ಎಂಬ ಬಗ್ಗೆ ದಾವಾ ಪತ್ರದಲ್ಲಿ ನಮೂದು ಮಾಡಲಾಗಿದೆಯೇ ಎಂದರೆ ನಮ್ಮ ತಂದೆಯ ಆಸ್ತಿಗಳಿಂದ ಆದಾಯ ಬರುತ್ತಿತ್ತು.

ನಮ್ಮ ತಂದೆ ಮರಣ ಹೊಂದಿ ಎಷ್ಟು ವರ್ಷಗಳಾಗಿದೆ ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆಯು ಆಸ್ತಿಗಳಿಂದ ಅಪಾರವಾಗಿ ಆದಾಯ ಹೊಂದಿದ್ದರು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ. ನನಗೆ ದಾವಾ ಆಸ್ತಿಯಲ್ಲಿ ಭಾಗಾಂಶದ ಹಕ್ಕು ಇಲ್ಲದೆ ಇದ್ದರೂ ಸಹ ನನ್ನ ಅಣ್ಣನ ಮಾತು ಕೇಳಿಕೊಂಡು ದುರ್ವಾಜ್ಯ ಹೂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**